ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Special Issue-3, March - April 2026, Pp. 71-76
©*IIMRD*, Mysuru
IIMRD JOURNALS
www.iimrd.com

# ಜಾಗತಿಕ ಮಹಾ ಯುದ್ಧಗಳು ಮತ್ತು ಬೆಂಗಳೂರು

**ಡಾ.ವಿ.ಕಾಂತರಾಜು**
ಉಪನ್ಯಾಸಕರು, ಇತಿಹಾಸ ವಿಭಾಗ, ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು

**ಸಾರಾಂಶ: (Abstract)**

*ಐತಿಹಾಸಿಕವಾಗಿ ಬೆಂಗಳೂರು ನಗರವಾಗಿ ರೂಪುಗೊಂಡ ಹಿನ್ನೆಲೆಯನ್ನು ಗಮನಿಸಿದಾಗ ಹಲವು ಆಯಾಮಗಳನ್ನು ನಗರವು ತನ್ನ ಪ್ರಸ್ತುತ ಹಂತವನ್ನು ತಲುಪಿದೆ. ಬೆಂಗಳೂರು ಇಂದು ಕರ್ನಾಟಕ ಮತ್ತು ಭಾರತದಲ್ಲಿ ಮಾತ್ರವಲ್ಲದೆ ಜಾಗತಿಕ ಮಟ್ಟದಲ್ಲಿ ತನ್ನ ಚಾಪನ್ನು ಮೂಡಿಸಿಕೊಂಡಿದೆ. ಬೆಂಗಳೂರು ನಗರವೂ ಇತಿಹಾಸ ಪೂರ್ವ ಕಾಲದಿಂದಲೂ ಮಾನವ ಸಂಸ್ಕೃತಿ ನೆಲೆಬೀಡಾಗಿತ್ತು ಎಂಬುದು ಬೆಂಗಳೂರು ಪರಿಸರದಲ್ಲಿ ದೊರೆತಿರುವ ಇತಿಹಾಸ ಪೂರ್ವ ಕಾಲದ ನಿವೇಶನಗಳು ಮತ್ತು ಅವಶೇಷಗಳನ್ನು ಗಮನಿಸಿದಾಗ ಕಂಡುಬರುವುದು. ನಂತರದಲ್ಲಿ 16ನೇ ಶತಮಾನದಲ್ಲಿ ಬೆಂಗಳೂರಿನಲ್ಲಿ ಕೆಂಪೇಗೌಡರಿಂದ ರೂಪಿತವಾದ ಪ್ರಭುತ್ವವು ಮುಂದೆ ಹಲವು ರಾಜಪ್ರಭುತ್ವಗಳ ಅದೀನದಲ್ಲಿ ವ್ಯವಸ್ಥಿತ ಸ್ವರೂಪವನ್ನು ಪಡೆದಿದೆ. ಹೀಗೆ ಹಲವು ಪ್ರಭುತ್ವಗಳ ಆಳ್ವಿಕೆಗೊಳಪಟ್ಟು ಬೆಂಗಳೂರು ಐತಿಹಾಸಿಕವಾಗಿ ತನ್ನದಾದ ಸ್ಥಾನವನ್ನು ಕರ್ನಾಟಕದ ಇತಿಹಾಸದಲ್ಲಿ ಪಡೆದಿದೆ. ಈ ಲೇಖನದಲ್ಲಿ ಮಹಾಯುದ್ಧಗಳ ಸಮಯದಲ್ಲಿ ಬೆಂಗಳೂರು ಭಾಗವಹಿಸಿದ ರೀತಿ ಮತ್ತು ಅದರ ಪ್ರಯತ್ನವನ್ನು ಸಂಕ್ಷಿಪ್ತವಾಗಿ ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.*

**ಮುಖ್ಯಪದಗಳು (Keywords):** *ಕರ್ನಾಟಕ ಇತಿಹಾಸ, ಬೆಂಗಳೂರು, ಜಾಗತಿಕ ಯುದ್ಧಗಳು*

**ಪೀಠಿಕೆ**

ಬೆಂಗಳೂರಿನ ಆಯಕಟ್ಟಿನ ನೆಲೆಕಟ್ಟು ಅಥವಾ ಸ್ಥಾನ ಮತ್ತು ಪರಿಸರ  ಯುರೋಪಿನವರ ಕಣ್ಣು ಬೆಂಗಳೂರು ಮೇಲೆ ಬಿತ್ತು. ಹೊಸತು ಕಾಲದಲ್ಲಿ ಬೆಂಗಳೂರು ಬ್ರಿಟಿಷರ ಆಡಳಿತ ಕೇಂದ್ರವಾಗಿ ಮತ್ತಷ್ಟು ಪ್ರವರ್ಧಮಾನ ಪಡೆಯಿತು. ಹಾಗೆಯೇ ಕ್ರಿಸ್ತಶಕ ಆರಂಭಕಾಲದಲ್ಲಿಯೇ ಬೆಂಗಳೂರು ರೋಮನ್ನರಿಗೆ ವ್ಯಾಪಾರದ ನೆಲೆಯಾಗುವ ಮೂಲಕ ಜಾಗತಿಕ ಮಟ್ಟದಲ್ಲಿ ಬೆಂಗಳೂರಿನ ಗುರುತು ಮೂಡಿಸಿತ್ತು ಎಂಬುದು ಬೆಂಗಳೂರಿನಲ್ಲಿ ದೊರೆತಿರುವ ರೋಮ್‌ನ ರಾಜರಾದ ಆಗಸ್ಟ್‌ಸ್ ಮತ್ತು ಟೈಬಿರಿಯಸ್‌ರ  ಕಾಲದ ನಾಣ್ಯಗಳು ಸಾಕ್ಷಿಯಾಗಿವೆ. ಬ್ರಿಟಿಷ್ ವಸಾಹತುಕಾಲದಲ್ಲಿ ಬೆಂಗಳೂರು ಮತ್ತಷ್ಟು ಬೆಳವಣಿಗೆಯನ್ನು ಕಂಡಿದ್ದು ಮಾತ್ರವಲ್ಲದೆ ಬೆಂಗಳೂರಿನಲ್ಲಿ ನೆಲೆಸಲು ಯುರೋಪಿಯನ್ ಅಧಿಕಾರಿಗಳಲ್ಲಿ ತೀವ್ರವಾದ ಪೈಪೋಟಿ ಇತ್ತು

*Please cite this article as:* ಕಾಂತರಾಜು, ವಿ. (2026). ಜಾಗತಿಕ ಮಹಾ ಯುದ್ಧಗಳು ಮತ್ತು ಬೆಂಗಳೂರು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ.* 71–76

ಎಂಬುದು ಮೈಸೂರು ರಾಜ್ಯ ಆಳ್ವಿಕೆಗೆ ಕಮಿಷನರ್‌ಗಳ ನೇಮಕ ಸಂಧರ್ಭದಲ್ಲಿ ಅಧಿಕಾರಿಗಳಲ್ಲಿ ಇದ್ದ ತೀವ್ರ ಪೈಪೋಟಿ ಇದಕ್ಕೆ ನಿದರ್ಶನವಾಗಿದೆ.

ಅಂದಿನಿಂದ ಇಂದಿನವರೆಗೂ ಬೆಂಗಳೂರು ಜಾಗತಿಕ ಮಟ್ಟದಲ್ಲಿ ತನ್ನದೇ ಆದ ಮಹತ್ವದ ಸ್ಥಾನವನ್ನು ಪಡೆದು ಅಂತರಾಷ್ಟ್ರೀಯ ಘಟನೆಗಳಿಗೆ ಬೆಂಗಳೂರು ಸ್ಪಂದಿಸಿದ ರೀತಿ ಮತ್ತು ಪಾಲ್ಗೊಂಡ ರೀತಿ ಇದಕ್ಕೆ ಸಾಕ್ಷಿಭೂತವಾಗಿದೆ. 20ನೇ ಶತಮಾನದ ಪ್ರಾರಂಭದಲ್ಲಿ ಜಗತ್ತು ಕಂಡ ಎರಡು ಮಹಾಯುದ್ಧಗಳಲ್ಲಿ, ಬೆಂಗಳೂರು ಸಕ್ರಿಯವಾಗಿ ಪಾಲ್ಗೊಂಡಿತ್ತು ಎಂಬುದು ಹಲವು ದಾಖಲೆಗಳಲ್ಲಿ ಕಂಡುಬರುವುದು. ಮೈಸೂರು ಮಹಾರಾಜರ ಯುದ್ಧದ ಸಂದರ್ಭದಲ್ಲಿ ನೀಡಿದ ನೆರವು ಮೈಸೂರಿನ ಜನತೆಯ ರಾಜನ್ನು ಅನುಸರಿಸಿ ಸಕ್ರಿಯ ಸಹಾಯವನ್ನು ಮಾಡಿದ್ದರು ಎಂಬುದು ಸ್ಮರಣೆಯ ವಿಚಾರವಾಗಿದೆ.

ಮೊದಲ ಮಹಾಯುದ ಸಂದರ್ಭದಲ್ಲಿ ಮೈಸೂರಿನ ಭಾಗವಾಗಿ ಕಳುಹಿಸಲ್ಪಟ್ಟ ಮೈಸೂರು ಇಂಪಿರಿಯಲ್ ಲ್ಯಾಂಪರ್ಸ್ ಸೈನ್ಯವನ್ನು ಮಹಾರಾಜ ಕೃಷ್ಣರಾಜ ಒಡೆಯರು ಬೆಂಗಳೂರು ನಗರದಿಂದ ಅಕ್ಟೋಬರ್ 1914 ರಂದು ಕಳುಹಿಸಿಕೊಟ್ಟರು. ಆ ಸೈನ್ಯವು ಈಜಿಟ್ಟಿನ ಯುದ್ಧ ಭೂಮಿಯಲ್ಲಿ ಪಾಲ್ಗೊಂಡಿತ್ತು. ಹಾಗೆಯೇ ಸುಯೆಜ್ ಕಾಲುವೆಯಲ್ಲಿ ನಡೆದ ಯುದ್ಧದ ಪ್ರಮುಖ ಭಾಗವಾಗಿ ಈ ಸೈನ್ಯವು ಪಾಲುಗೊಂಡಿತ್ತು ಇದಲ್ಲದೆ ಪಾಲೆಸ್ಟೈನಿನ ಗಾಜಾ ಯುದ್ಧಭೂಮಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದು. ಈ ಸೇನೆಯ ತುಕುಡಿಯ ಭಾಗವಾಗಿ ಬೆಂಗಳೂರಿನಲ್ಲಿ ಸೈನಿಕರ ನೇಮಕಾತಿ ಆಂದೋಲನವನ್ನು ನಡೆಸಲಾಯಿತು. ಹಾಗೆ ಬೆಂಗಳೂರಿನಲ್ಲಿ ಇಂಡಿಯನ್ ವಾರ್ ಲೋನ್‌ನ ಭಾಗವಾಗಿ ದಿವಾನ್ ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸಿ ಯುದ್ಧ ಸಾಲ ನಿಧಿಗೆ ಕೊಡುಗೆಯನ್ನು ನೀಡಲು ಜಾಗೃತಿಯನ್ನು ಮೂಡಿಸಿದರು. ಇದರ ಮೂಲಕ ಬೆಂಗಳೂರಿನಲ್ಲಿ ನಗರದಲ್ಲಿ ಸಂಗ್ರಹವಾದ ಒಟ್ಟು ಮೊತ್ತ ರೂ.38,41,030 ಗಳಿಗೂ ಅಧಿಕವಾಗಿತ್ತು. ಈ ಯುದ್ಧಕ್ಕೆ ಸಹಾಯ ಮಾಡುವ ಉದ್ದೇಶದಿಂದ ಬೆಂಗಳೂರಿನ ಮುನ್ಸಿಪಾಲಿಟಿಯ ಕೌನ್ಸಿಲ್‌ನ ಅಧ್ಯಕ್ಷರಾಗಿದ್ದ ಕೆ.ಪಿ. ಪುಟ್ಟಣ್ಣ ಶೆಟ್ಟಿಯವರು ಅಧ್ಯಕ್ಷತೆಯಲ್ಲಿ ಬೆಂಗಳೂರು ನಗರದಲ್ಲಿ ಒಂದು ಉಪ ಕಮಿಟಿಯ ರಚಿಸಿದರು. ಬೆಂಗಳೂರಿನ ಜಿಲ್ಲಾ ಆಯುಕ್ತರಾದ ಕೆ ಚಾಂಡಿಯವರು ಈ ಉಪಸಮಿತಿಯ ಉಪಾಧ್ಯಕ್ಷರಾಗಿದ್ದರು ಇದರಲ್ಲಿ 30 ಗಣ್ಯ ಸದಸ್ಯರಿದ್ದರು, ಬಿ ರಾಮಚಂದ್ರ ಮೊದಲಿಯರ್, ಬಿ. ಕೆ ಗರುಡಾಚಾರ್ ಮತ್ತು ಇಸ್ಮಾನ್ ಖಾನ್ ರವರು ಜಂಟಿ ಕಾರ್ಯದರ್ಶಿಗಳು ಆಗಿದ್ದರು.

ಮೊದಲ ಮಹಾಯುದ್ಧದ ಸಹಾಯ ನೀಡಲು ಬೆಂಗಳೂರಿನ ಹಲವು ಸಂಘ ಸಂಸ್ಥೆಗಳು ಶ್ರಮಿಸಿದವು ಅವುಗಳಲ್ಲಿ ಮಹಿಳಾ ಸಂಘಗಳಾದ ಬೆಂಗಳೂರು ಮಹಿಳಾ ಸೇವಾ ಸಮಾಜದವರು ಯುದ್ಧದವ ಪ್ರಾರಂಭದಿಂದಲೂ ಯುದ್ಧಕ್ಕೆ ಸಂಬಂಧಿಸಿದಂತೆ ಹಲವು ಬಗೆಯ ಸೇವಾ ಕಾರ್ಯಗಳನ್ನು ಮಾಡಿದರು. 1915ರಲ್ಲಿ ಬೃಹತ್ ಸ್ತ್ರೀ ಸಮ್ಮೇಳನ ಏರ್ಪಡಿಸಿ ಅದರಲ್ಲಿ ಯುದ್ಧದ ನಿಧಿಗೆ ಹಣ ಸಂಗ್ರಹಿಸಲು, ಸೈನಿಕರ ಉಡುಪುಗಳನ್ನು, ಔಷದೋಪಕರಣಗಳನ್ನು ಮತ್ತು ಇತರ ಅಗತ್ಯ ವಸ್ತುಗಳನ್ನು ತಯಾರಿಸಿ ಯುದ್ಧಭೂಮಿಗೆ ಕಳಿಸುವುದಕ್ಕೆ ಸಹಾಯಕವಾಗುವ ರೀತಿಯಲ್ಲಿ ಮಹಿಳೆಯರಿಗೆ ಒಂದು ಕಮಿಟಿಯನ್ನು ರಚಿಸಲು ತಿರ್ಮಾನಿಸಲಾಯಿತು. ಆಗಸ್ಟ್ 1915 ರಂದು ಬೌರಿಂಗ್ ಇನ್ಸಿಟ್ಯೂಟ್‌ನಲ್ಲಿ ಫ್ಲಾಗ್ ಫೇರ್ ಉತ್ಸವದಲ್ಲಿ

ಸಂಸ್ಥೆಯ ಅಧ್ಯಕ್ಷರಾದ ಕೆ ಎಸ್. ಚಂದ್ರಶೇಖರ್ ಅವರ ಪತ್ನಿಯು ಯುದ್ಧದ ನಿಧಿಯ ಸಹಾಯಕ್ಕೆ ಬೆಳ್ಳಿ ಮತ್ತು ಇತರೆ ಅಮೂಲ್ಯ ವಸ್ತುಗಳನ್ನು ನೀಡಿದರು. ಸಂಸ್ಥೆಯ ಕಾರ್ಯದರ್ಶಿಯಾಗಿದ್ದ ರಾಮು ಅಯ್ಯಂಗಾರ್ ರವರ ಪತ್ನಿ ಮತ್ತು ಕೆಲವು ಮಹಿಳಾ ಸದಸ್ಯರುಗಳು ಸೇಂಟ್ ಜಾನ್ ಸಾಂಬುಲೆನ್ಸ್ ಅಸೋಸಿಯೇಷನ್ ರೆಸಿಡೆಂಟಲ್ ಬಂಗಲೆಯಲ್ಲಿ 14 ದಿನಗಳಿಗೊಮ್ಮೆ ನಡೆಯುತ್ತಿದ್ದ ಸಭಾ ಮಂಡಳಿಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಮಹಿಳಾ ಸೇವಾ ಸಮಾಜದ ರೀತಿಯಲ್ಲೇ ಮಹಿಳಾ ಶ್ರೀ ಶಾರದ ಸಮಾಜ ಸಹ ಈ ನಿಟ್ಟಿನಲ್ಲಿ ಸಕ್ರಿಯವಾಗಿ ಪಾಲ್ಗೊಂಡಿತ್ತು. ಈ ಸಮಾಜದ ಸದಸ್ಯರುಗಳು 1917ರಲ್ಲಿ ನಮ್ಮ ಸುದಿನ ಉತ್ಸಾಹವನ್ನು ಏರ್ಪಡಿಸಿ ಆ ಉತ್ಸವದಲ್ಲಿ ಹಲವು ಪದಾರ್ಥಗಳನ್ನು ಮಾರಾಟ ಮಾಡಿ ಬಂದ ಹಣವನ್ನು ಮೈಸೂರಿನ ಇಂಪಿರಿಯಲ್ ಸರ್ವಿಸಸ್ ಸೈನಿಕರ ಸಹಾಯಕ್ಕಾಗಿ ನೀಡಿದರು. 1917 ರಲ್ಲಿ ಬೆಂಗಳೂರಿನ ಲಾಲ್ ಬಾಗ್ ನಲ್ಲಿ ನಡೆದ ಫಲ ಪುಷ್ಪ ಪ್ರದರ್ಶನದಲ್ಲಿ ಈ ಸಮಾಜದ ಸದಸ್ಯರುಗಳು ಸುಂದರವಾದ ಅಂಚೆ ಪತ್ರಗಳು, ಚಿತ್ರಪಟದ ಪುಸ್ತಕಗಳು ಮತ್ತು ಇತರೆ ವಸ್ತುಗಳನ್ನು ಮಾರಾಟ ಮಾಡಿ ಬಂದ ಹಣವನ್ನು ಯುದ್ದ ನಿಧಿಗೆ ನೀಡಿದರು. ನಿಧಿಗೆ ಸಂಬಂಧಿಸಿದ ಹಾಗೆ ಈ ಸಂಸ್ಥೆಗಳಿಂದ ಸಂಗ್ರಹಿಸಿದ ಹಣ ಬೆಂಗಳೂರು ನಗರದ ಮಹಿಳಾ ಸಮಾಜಗಳು ನಗರದ ಬೇರೆ ಬೇರೆ ಸ್ಥಳಗಳಲ್ಲಿ ವಿವಿಧ ಸಾಂಸ್ಕೃತಿಕ ಉತ್ಸವಗಳನ್ನ ನಡೆಸಿ ಹಣವನ್ನು ಸಂಗ್ರಹಿಸಿ ಯುದ್ಧ ನಿಧಿಗೆ ನೀಡಿದರು. ಮೊದಲ ಯುದ್ಧಕ್ಕೆ ಸಹಾಯವಾಗಿ ಮೈಸೂರು ಯುದ್ಧ ನಿಧಿ ಕೇಂದ್ರ ಕಚೇರಿಯು ಬೆಂಗಳೂರಿನ ಅರಮನೆ ಖಜಾನೆಯಲ್ಲಿತ್ತು. ಇದೇ ರೀತಿಯಲ್ಲಿ ಬೆಂಗಳೂರಿನ ವೈ.ಎಂ.ಸಿ.ಎ. ಸಂಘದ ಸದಸ್ಯರು ಯುದ್ಧದ ನಿಧಿಗೆ ಉದಾರವಾಗಿ ದೇಣಿಗೆಯನ್ನು ನೀಡಿದರು. ಯುದ್ಧ ನಿಧಿಯ ಸಂಗ್ರಹಕ್ಕೆ ಲಾಲ್‌ಬಾಗ್‌ನಲ್ಲಿ ಬೆಳದಿಂಗಳ ಬ್ಯಾಂಡ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಖೈದಿಗಳೂ ಸೈನಿಕರಿಗೆ ಬೇಕಾದ ಹಗ್ಗದ ತಯಾರಿಕೆಯಲ್ಲಿ ತೊಡಗಿತು. ಇಲ್ಲಿ ಸುಮಾರು 38.551 ಪೌಂಡ್ ತೂಕದ ಹಗ್ಗವನ್ನು ತಯಾರಿಸಿ ಕಳುಹಿಸಿಕೊಡಲಾಯಿತು. ಅದೇ ರೀತಿಯಾಗಿ ಇಲ್ಲಿಂದ ಮೆಸಪಟೋಮಿಯಾದಲ್ಲಿ 10ನೇ ಪೋರ್ಟ್ವರ್‌ದಳದ ಪೋರ್ಟ್ವರುಗಳಾಗಿ ಸೇವೆ ಮಾಡಲು 244 ಖೈದಿಗಳನ್ನು ಕಳುಹಿಸಿಕೊಡಲಾಯಿತು. ಯುದ್ಧದ ನಿಲುಗಡೆಯ ಸುದ್ದಿಯು 11ನೇ ನವಂಬರ್ 1918 ರಂದು ಬೆಂಗಳೂರಿಗೆ ತಲುಪಿತು. ಡಿಸೆಂಬರ್ 7ನೇ ಡಿಸೆಂಬರ್ 1918 ರಂದು ಯುದ್ಧ ಶಾಂತಿಯ ದಿನವನ್ನಾಗಿ ಆಚರಿಸಲು ಎಲ್ಲಾ ಅಂಗಡಿ ಮುಗ್ಗಟ್ಟುಗಳು ಕಚೇರಿಗಳನ್ನು ಮತ್ತು ಶಿಕ್ಷಣ ಸಂಸ್ಥೆಗಳನ್ನು ರದ್ದುಗೊಳಿಸಿ ನಗರದಾದ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಈ ದಿನದಂದು ಮೈಸೂರು ಸೇನೆಯ ಕಾಲ್ದಳದ ಸವಾರರು ಟ್ರಾನ್ಸ್‌ಪೋರ್ಟ್ ಕೋರ್‌ನವರು ಬ್ಯಾಂಡ್ ವಾದ್ಯ ಮತ್ತು ಬಾವುಟಗಳೊಂದಿಗೆ ದೊಡ್ಡಪೇಟೆ ಮತ್ತು ಕೋಟೆಯ ಮೂಲಕ ಮೆರವಣಿಗೆ ನಡೆಸಿದರು ಇದರಲ್ಲಿ ಸೇನೆಯ ಮುಖಂಡರಾಗಿದ್ದ ರಾಜಕುಮಾರ ಸಿ. ದೇಶಿರಾಜ ಅರಸರು ಮತ್ತು ಜಿಲ್ಲಾ ನ್ಯಾಯಾಧೀಶರಾದ ಶ್ರೀ ಪಿ.ಎಫ್. ಬೌರಿಂಗ್ ರವರು ಭಾಗವಹಿಸಿದ್ದರು. ಇವರಲ್ಲದೆ ಮುನಿಸಿಪಾಲ್ ಕೌನ್ಸಿಲ್ ಅಧ್ಯಕ್ಷರಾಗಿದ್ದ ಕೆಪಿ ಪುಟ್ಟಣ್ಣ ಶೆಟ್ಟಿ ಅವರು ಮತ್ತು ಉಪಾಧ್ಯಕ್ಷ ಅಬ್ಬಾಸ್ ಖಾನ್ ಅವರು ಮಹಾರಾಜರ ಸಂದೇಶವನ್ನು ಓದಿದರು. ಹಾಗೆ ನಗರದ ಹಳೆ ತರುಗು ಪೇಟೆ, ನರ್ಥ ಪೇಟೆ ಗಾಣಿಗರಪೇಟೆ ಗಳಲ್ಲಿ ಅನ್ನದಾನವನ್ನು ಏರ್ಪಡಿಸಲಾಯಿತು. ಈ ದಿನ ಸಂಜೆ ಸುಮಾರು 2000 ವಿದ್ಯುತ್ ದೀಪಗಳನ್ನು ಏಕ ಕಾಲದಲ್ಲಿ ಬೆಳಗಿಸಲಾಯಿತು ಮತ್ತು ವಿವಿಧ ರೀತಿಯ

ಪಟಾಕಿಗಳನ್ನು  ಸಿಡಿಸಿ ಸಂಭ್ರಮಿಸಿದರು. ಬ್ಯಾಂಡ್ ವಿಭಾಗದವರು ತಮ್ಮ ವಾದ್ಯಗಳಲ್ಲಿ ಬ್ರಿಟಿಷ್, ಫ್ರೆಂಚ್ ಮತ್ತು ಮೈಸೂರು ರಾಷ್ಟ್ರಗೀತೆಗಳ ನುಡಿಸಿದರು.

ಮೊದಲ ಮಹಾಯುದ್ಧದ ರೀತಿಯಲ್ಲಿ ಎರಡನೇ ಮಹಾ ಯುದ್ಧದಲ್ಲಿಯೂ ಸಹ ಬೆಂಗಳೂರು ಸಕ್ರಿಯವಾಗಿ ಪಾಲ್ಗೊಂಡಿತ್ತು. ಎರಡನೇ ಮಹಾಯುದ್ಧ ಪ್ರಾರಂಭವಾದಾಗ  ಬ್ರಿಟಿಷ್ ಭಾರತ ಸರ್ಕಾರವು ತನ್ನ ಸಂಸ್ಥಾನಗಳ ಮುಖ್ಯಸ್ಥರಿಗೆ ನಿರ್ದೇಶನ ನೀಡಿ ತನ್ನ ಎಲ್ಲಾ ಶ್ರಮವನ್ನು ಯುದ್ಧದ ಕಾರಣಕ್ಕೆ ಒಗ್ಗೂಡಿಸಲು ಕರೆ ನೀಡಿದಾಗ ಮೈಸೂರು ಸಂಸ್ಥಾನದ ಪ್ರಮುಖ ನಗರವಾಗಿದ್ದ ಬೆಂಗಳೂರು ಮತ್ತು ಬೆಂಗಳೂರು ಕಂಟೋನ್ಮೆಂಟ್‌ನ ಜನರು ಇದಕ್ಕೆ ಮಹತ್ವದ ಕೊಡುಗೆಯನ್ನು ನೀಡಿದರು. ಬೆಂಗಳೂರು ರೈಲು ನಿಲ್ದಾಣದಿಂದ ರೈಲುಗಳು ಸೈನಿಕರನ್ನು ತುಂಬಿಕೊಂಡು ಯುದ್ಧ ಭೂಮಿಗೆ ಹೋರಾಡಲು ಹೊರಟಿದ್ದವು. ಬೆಂಗಳೂರು ನಗರದಲ್ಲಿ ಸೇನಾ ಕಾರ್ಯದ ನೇಮಕಾತಿಗೆ ಸಂಬಂಧಿಸಿದಂತೆ ಚಟುವಟಿಕೆಗಳು ಬಿರುಸಿನಿಂದ ನಡೆದವು. ಹಾಗೆಯೇ ಸೈನಿಕರಿಗೆ ತರಬೇತಿ ನೀಡಲು ಟ್ರೈನಿಂಗ್ ಸ್ಕೂಲ್‌ನಲ್ಲಿ ಆಫೀಸರ್ ಟ್ರೈನಿಂಗ್ ನಲ್ಲಿ ಬ್ರಿಟಿಷ್ ಅಧಿಕಾರಿಗಳು ಸ್ಥಳೀಯ ಸೈನಿಕರಿಗೆ ತರಬೇತಿ ನೀಡುವ ಯೋಜನೆಯನ್ನು ಪ್ರಾರಂಭಿಸಿದರು. ಇಲ್ಲಿ ತರಬೇತಿ ನೀಡಲು ಯುರೋಪಿಯನ್‌ರಗಳನ್ನು ಭಾರತೀಯ ಸೇವೆಗೆ ಒಳಪಡಿಸಿ ಇಂಗ್ಲೆಂಡಿನಿಂದ ಬೆಂಗಳೂರಿಗೆ ಕರೆತಂದು ಆ ಶಾಲೆಯಲ್ಲಿ ತರಬೇತಿಯನ್ನು ನೀಡಲಾಯಿತು. ಈ ಶಾಲೆಯಲ್ಲಿ ಯುರೋಪಿಯನರಿಗೆ ಮಾತ್ರ ಮೀಸಲಾಗಿದ್ದ ತರಬೇತಿ ಯುದ್ಧ ಕಾಲದಲ್ಲಿ ಭಾರತೀಯ ಸೈನಿಕರಿಗೆ ಮುಕ್ತವಾಯಿತು. ಮತ್ತೊಂದೆಡೆ ಯುದ್ಧಕ್ಕೆ ಸಹಾಯವನ್ನು ವಿರೋಧಿಸಿ ಕಾರ್ಮಿಕ ನಾಯಕರಾಗಿದ್ದ ಕೆ.ಟಿ. ಭಾಷ್ಯ ಮತ್ತು ಎನ್.ಕೆ.ಶಂಕರ್ ರವರು ಆರಂಭದಲ್ಲಿ ಕೆಲವು ಕಾರ್ಖಾನೆಗಳ ಕಾರ್ಮಿಕರು ಕೆಲಸವನ್ನು ನಿಲ್ಲಿಸಿ, ಮುಷ್ಕರ ನಡೆಸಿದರು. ಸರ್ಕಾರವು ಈ ರೀತಿಯಲ್ಲಿ ಮುಷ್ಕರದಲ್ಲಿ ನಿರತನಾದವರನ್ನು ಬಂಧಿಸಿ ಪೋಲಿಸ್ ಠಾಣೆಗಳಲ್ಲಿ ಬಂಧಿಸಿದರು. ಈ ಅವಧಿಯಲ್ಲಿ ಬಂಧನಕ್ಕೆ ಒಳಗಾದವರ ಸಂಖ್ಯೆ 1700. ಬೆಂಗಳೂರಿನ ಕಾಟನ್‌ಪೇಟೆ, ಪೋಸ್ಟ್ ಆಫೀಸ್, ಕೆಂಗೇರಿ ಗೇಟ್ ಪೊಲೀಸ್ ಠಾಣೆಗಳಿಗೆ ಜನರು ಮುತ್ತಿಗೆ ಹಾಕಿದರು. ಪೊಲೀಸರು ಸತ್ಯಾಗ್ರಹಗಳ ಮೇಲೆ ಗುಂಡಿನ ದಾಳಿ ನಡೆಸಿದರು. ಅದರಲ್ಲಿ 9 ಮಂದಿ  ಮರಣ ಹೊಂದಿ ಮತ್ತು 39 ಜನ ಗಾಯಗೊಂಡರು. ಆದರೂ ಸಹ ಮೈಸೂರಿನ ಮಹಾರಾಜರ ಕರೆಯಂತೆ, ಬೆಂಗಳೂರಿನ ಜನ ಸಹ ತಮ್ಮ ಇತಿಮಿತಿಗಳಲ್ಲಿ ಯುದ್ಧಕ್ಕೆ ನೆರವನ್ನು ನೀಡಿದರು. ಎರಡನೇ ಮಹಾಯುದ್ಧ ಸಂದರ್ಭದಲ್ಲಿ ಬೆಂಗಳೂರಿನಿಂದ ಯುದ್ಧದಲ್ಲಿ ಪಾಲ್ಗೊಳ್ಳಲು  ಮೈಸೂರು ಸಂಸ್ಥಾನದ ಒಂದನೇ ಬೆಟಾಲಿಯನ್ ಸೈನಿಕ ಪಡೆಯ ಘಟಕವು ಹೋಗಿತ್ತು. ಅದಕ್ಕೂ ಮುನ್ನ ಬೆಂಗಳೂರಿನ ಪರೇಡ್ ಮೈದಾನದಲ್ಲಿ ಈ ಸೇನೆಯನ್ನು ಉದ್ದೇಶಿಸಿ  ಅಂದಿನ ಮಹಾರಾಜರಾಗಿದ್ದರು ಜಯಚಾಮರಾಜ ಒಡೆಯರು ಮಾತನಾಡಿದರು. ಈ ಸೇನಾ ಪಡೆಯ ಜೊತೆಗೆ ಮತ್ತೊಂದು ತುರ್ತು ಸಹಾಯಕ ತುಕುಡಿಯಾದ ಮೆಕ್ಯಾನಿಕಲ್ ಟ್ರಾನ್ಸ್‌ಪೋರ್ಟ್ ಯೂನಿಟ್ ಅನ್ನು ಕಳಿಸಿಕೊಡಲಾಗಿತ್ತು. ಈ ದಳಕ್ಕೆ ನೇಮಕವಾದವರಿಗೆ ಬೆಂಗಳೂರಿನ ಸುತ್ತಮುತ್ತಲಿನಲ್ಲಿ ವಿಸ್ತಾರವಾದ ಪ್ರದೇಶವನ್ನು ಮಿಲಿಟರಿ (ಕ್ಯಾಂಪ್)ಗಳಿಗೆ ಬೀಡಾರಗಳನ್ನು ನಿರ್ಮಿಸಿಕೊಳ್ಳಲು ಮಡಿವಾಳ, ಅಗರ, ರಾಜನಕುಂಟೆ ಮತ್ತು ಜಾಲಹಳ್ಳಿಗಳಲ್ಲಿ ಸ್ಥಳಗಳನ್ನು ನೀಡಲಾಯಿತು. ಈ ಸ್ಥಳಗಳಲ್ಲಿ ಯುದ್ಧ ಕೈದಿಗಳಿಗೆ ಬಿಡಾರಗಳ ವ್ಯವಸ್ಥೆಯನ್ನು ಕೂಡ ಮಾಡಲಾಯಿತು. ಆದ್ದರಿಂದ

ಬೆಂಗಳೂರಿನಲ್ಲಿ ಹಲವು ಸೈನಿಕ ವಸತಿ ಶಾಲೆಗಳು ತಲೆಯೆತ್ತಿದವು. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ರಾಯಲ್ ಇಂಡಿಯನ್ ನೇವಿಗೆ ನೇಮಕಾತಿಗೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ಟ್ರಿನಿಟಿ ಚರ್ಚ್‌ನ ಸಮೀಪದ ಕಾರ್ನ್‌ವಾಲೀಸ್ ಬ್ಯಾರಕ್ ನ ಕಚೇರಿಯನ್ನು ಸ್ಥಾಪಿಸಲಾಗಿತ್ತು. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಯುರೋಪಿನಲ್ಲಿ ಮಿತ್ರ ಪಕ್ಷಕ್ಕೆ ಖೈದಿಗಳಾಗಿದ್ದ ಇಟಲಿಯ ಸಾವಿರಾರು ಸೈನಿಕರಿಗೆ ಬೆಂಗಳೂರಿನಲ್ಲಿ ನೆಲೆಯನ್ನು ಒದಗಿಸಲಾಗಿತ್ತು ಎಂದು ಕ್ಯಾನನ್ ಎಲ್ಲಿಕ್  ಎಂಬ ಅಧಿಕಾರಿಯ ಪತ್ರದಲ್ಲಿ ಮಾಹಿತಿ ಇದೆ. ಅದೇ ರೀತಿ ರೆಲ್ಲೈಗ್ ಟ್ರಾವೆಲಿಯನ್ ಅವರು ಬರೆದಿರುವ ಗ್ರಂಥದಲ್ಲಿ ತಿಳಿಸಿರುವುದಂತೆ ಸುಮಾರು 23 ಸಾವಿರ ಇಟಲಿಯ ಖೈದಿಗಳು ಈಥಿಯೋಪಿಯದಿಂದ ಬೆಂಗಳೂರಿಗೆ ಬಂದಿದ್ದರು.  ಇವರಿಗೆ ನಗರದಿಂದ 8 ಮೈಲು ದೂರದಲ್ಲಿ ಬಿಡಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಆ ಸಂದರ್ಭದಲ್ಲಿ ಇಷ್ಟು ಜನರಿಗೆ ವಸತಿಗಳನ್ನು ಮತ್ತು ಇತರ ಅಗತ್ಯಗಳನ್ನು ಒದಗಿಸುವುದು ತುಂಬಾ ಕಷ್ಟದ ವಿಷಯವಾಗಿತ್ತು ಅವರನ್ನು  400– 500 ರನ್ನು ಒಳಗೊಂಡ ಒಂದೊಂದು ಗುಂಪುಗಳಾಗಿ ವಿಂಗಡಿಸಿ ಜಾಲಹಳ್ಳಿ, ಜಕ್ಕೂರು  ಮತ್ತು ಹೆಬ್ಬಾಳ ಮುಂತಾದ ಸ್ಥಳಗಳಲ್ಲಿ ತಾತ್ಕಾಲಿಕ ಬಿಡಾರಗಳನ್ನು ನಿರ್ಮಿಸಿ ವಸತಿಗಳನ್ನು ಕಲ್ಪಿಸಲಾಯಿತು. ಈ ಅಂಶವು ಎರಡನೇ ಮಹಾಯುದ್ಧ ಕಾಲದಲ್ಲಿ ಬೆಂಗಳೂರು ಸೈನಿಕರಿಂದ ತುಂಬಿತ್ತು ಎಂದು ಸ್ಪಷ್ಟವಾಗುವುದು. ಈ ಸಂದರ್ಭದಲ್ಲಿ ಯುದ್ಧಕ್ಕೆ ಸಹಾಯ ಮಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಯುದ್ಧ ಒಕ್ಕೂಟವನ್ನು  4ನೇ ಮೇ 1942 ರಂದು ಬೆಂಗಳೂರಿನಲ್ಲಿ ಸಾರ್ವಜನಿಕ ಕಚೇರಿಯನ್ನು ಸ್ಥಾಪಿಸಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ವೈಸ್‌ರಾಯ್‌ರವರು ಉದ್ಘಾಟಿಸಿದರೆ ದಿವಾನರು ಅಧ್ಯಕ್ಷತೆಯನ್ನು ವಹಿಸಿದ್ದರು. ಬೆಂಗಳೂರು ನಗರದ ರಾಷ್ಟ್ರೀಯ ಯುದ್ಧ ಒಕ್ಕೂಟದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ ನಾಯಕರೆಂದರೆ  ಐ.ಕೆ.ಪುರುಷೋತ್ತಮ ನಾಯ್ಡು, ಬಿಎಂ ಶ್ರೀಕಂಠಯ್ಯ, ರಂಗಸ್ವಾಮಿ, ಪಿ.ಎಸ್ ಶಿವಸ್ವಾಮಿ, ಸಿ.ವಿ ರಾಮನ್, ಮುಂತಾದವರು ಸಕ್ರಿಯರಾಗಿದ್ದರು. ಇದರ ಕಾರ್ಯಾತ್ಮಕವಾಗಿ ಶೈಕ್ಷಣಿಕ ಸಂಸ್ಥೆಗಳಾದ ಸೆಂಟ್ರಲ್ ಹೈಸ್ಕೂಲ್, ವಾಣಿವಿಲಾಸ್, ಪೋರ್ಟ್ ಹೈಸ್ಕೂಲ್ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿ ಬೆಂಗಳೂರು ನಗರದಲ್ಲಿ ಶಾಲಾ ಕಮಿಟಿಗಳನ್ನು ರಚಿಸಲಾಯಿತು. ಬೆಂಗಳೂರು ನಗರವಲ್ಲದೆ ತಾಲೂಕು ಕೇಂದ್ರಗಳಾದ ಚನ್ನಪಟ್ಟಣ, ಕ್ಲೋಸ್‌ಪೇಟೆ, ಆನೇಕಲ್, ನೆಲಮಂಗಲ ಮತ್ತು ದೊಡ್ಡಬಳ್ಳಾಪುರಗಳಲ್ಲಿ ಒಕ್ಕೂಟದ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಬೆಂಗಳೂರು ನಗರದಲ್ಲಿ ಗ್ರೋ ಮೋರೆಫುಡ್ ಕ್ರಾಫ್ಟ್ ಕ್ಯಾಂಪೇನ್ ನಡೆಸಲಾಯಿತು. ಯುದ್ಧ ಒಕ್ಕೂಟದ ಪ್ರಚಾರ ಆಂದೋಲನದ ಕಾರ್ಯಕ್ರಮದ ಭಾಗವಾಗಿ ಟೌನ್ ಹಾಲ್ ಸೇರಿದಂತೆ ನಗರದ ಹಲವು ಕಡೆ ಸಭೆಗಳು ಮತ್ತು ಉಪನ್ಯಾಸಗಳು ಸಂಘಟನೆಯಾದವು. ಇದಕ್ಕೆ ಪೂರಕವಾಗಿ ಎನ್ನುವಂತೆ ಬೆಂಗಳೂರಿನಲ್ಲಿ ಯುದ್ಧ ನಿಧಿ ಸಂಸ್ಥೆಗಳು ಸ್ಥಾಪನೆಯಾದವು. ಅದರಲ್ಲಿ ಮೈಸೂರು ವಾರ್ ಫಂಡ್ 1940 ರಲ್ಲಿ ಸ್ಥಾಪನೆಯಾಯಿತು ಇದರ ಅಧ್ಯಕ್ಷರಾಗಿದ್ದವರು ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್, ಇವರ ನಂತರ ಎಂ.ಎನ್ ಮಾಧವರಾಯರು. 19ನೇ ಜುಲೈ 1941 ಟೌನ್ ಹಾಲ್‌ನಲ್ಲಿ ಇದರ ಸಭೆಯನ್ನು ನಡೆಸಲಾಯಿತು. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಶತ್ರು ಪಡೆಯ ಸೇನೆಗಳು ಭಾರತ ಪೂರ್ವಗಡಿಯನ್ನು ತಲುಪಿದ ಸುದ್ದಿಯನ್ನು ತಿಳಿದು ಬೆಂಗಳೂರಿನಲ್ಲಿ ವಾಯು ದಾಳಿ ಮುಂಜಾಗ್ರತ ಕ್ರಮಗಳನ್ನು ಜಾರಿ ಮಾಡಲಾಗಿತ್ತು. ದಿನಾಂಕ 20 ಮತ್ತು 21ನೇ ಡಿಸೆಂಬರ್ 1944 ರಂದು ಬೆಂಗಳೂರಿನ ಲಾಲ್‌ಬಾಗ್‌ನ  ಗ್ಲಾಸ್‌ಹೌಸ್‌ನಲ್ಲಿ ತಂಬುಚಟ್ಟಿ ಅವರ

ಮಾರ್ಗ ದರ್ಶನದಲ್ಲಿ ಭಾರತೀಯ ವಾಯುಪಡೆ ಮತ್ತು ರಾಯಲ್ ಏರ್‌ಫೋರ್ಸ್‌ನ ಸಮಾರು 1000 ಸದಸ್ಯರೊಂದಿಗೆ ಟೀ ಔತಣಕೂಟವನ್ನು ಏರ್ಪಡಿಸಲಾಗಿತ್ತು. ಅಲ್ಲಿ ಸೈನಿಕರಿಗೆ ಮನೋರಂಜನೆ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯ ನಾಗರಿಕರು ಭಾಗವಹಿಸಿ ಸೈನಿಕರನ್ನು ಭೇಟಿ ಮಾಡಿ ಅವರೊಂದಿಗೆ ಬೆರೆಯಲು ಅವಕಾಶ ಮಾಡಲಾಯಿತು. ಮೊದಲ ಮಹಾಯುದ್ಧದ ಸಂದರ್ಭ ರೀತಿಯಲ್ಲಿ ಎರಡನೇ ಮಹಾಯುದ್ಧದ ಸಮಯದಲ್ಲಿಯೂ ಸಹ ಬೆಂಗಳೂರಿನ ಮಹಿಳೆಯರು ಯುದ್ಧ ನಿಧಿಯ ಸಹಾಯಕ ಕಮಿಟಿಯಾಗಿ ಹಲವು ಸಮಾಜದ ಮಹಿಳಾ ಸಮಾಜಗಳು ತಮ್ಮ ಸೇವೆಯನ್ನು ಸಲ್ಲಿಸಿದವು. ಬೆಂಗಳೂರಿನ ಪ್ರಸಿದ್ಧ ಮಹಿಳಾ ಸಮಾಜ ವಾಗಿದ್ದ ಶಂಕರಪುರ ಮಹಿಳ ಸೇವಾ ಸಮಾಜವು ಸ್ವದೇಶಿ ವಸ್ತುಗಳ ಪ್ರದರ್ಶನವನ್ನು ಎರ್ಪಡಿಸಿತ್ತು. ಪ್ರದರ್ಶನದ ಉದ್ಘಾಟನೆಗೆ ಆಗಮಿಸಿದ್ದ ಕಾನೂನು ಮಂತ್ರಿಯಾಗಿದ್ದ ಎ.ವಿ. ರಾಮನಾಥನ್ ರವರು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಷ್ಟ್ರೀಯ ಚಟುವಟಿಕೆಗಳಲ್ಲಿ ಗುರುತಿಸಿಕೊಳ್ಳಲು ಕರೆ ನೀಡಿದರು. 14ನೇ ಮೇ 1945 ರಂದು ಮೈಸೂರಿನ ದಿವಾನರು ಬೆಂಗಳೂರಿನಲ್ಲಿ ನಡೆಸಿದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯಲ್ಲಿ ಎರಡನೇ ಮಹಾಯುದ್ಧದಲ್ಲಿ ಶತ್ರುಪಡೆಯ ಸೈನಿಕರು ಸೋಲನ್ನು ಆಚರಿಸಲು ಸಭೆ ಸೇರಿದರು. ಆ ದಿನದಂದು ನಗರ ಮುನಿಸಿಪಾಲಿಟಿಯು ಬಡ ಜನರಿಗೆ ಸಾಮೂಹಿಕ ಭೋಜನ ವ್ಯವಸ್ಥೆಯನ್ನು ಏರ್ಪಡಿಸಿತು. ಈ ಅಂಶವು ದ್ವಿತೀಯ ಮಹಾಯುದ್ಧ ಅಂತ್ಯ ಆದಾಗ ಬೆಂಗಳೂರಿನ ಜನತೆಯು ಅದರ ಸಂಭ್ರಮ ಆಚರಣೆ ಮಾಡುವುದರ ಮೂಲಕ ಇದಕ್ಕೆ ನೆರವು ನೀಡಿದ ರೀತಿಯಲ್ಲಿ ಯುದ್ಧದ ಅಂತ್ಯದ ಸಂಭ್ರಮ ಆಚರಣೆಯಲ್ಲಿ ಬೆಂಗಳೂರಿಗರು ಪಾಲ್ಗೊಂಡರು ಎಂಬುದನ್ನು ಚರಿತ್ರೆಯ ದಾಖಲೆಗಳಿಂದ ತಿಳಿಯಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಲಕ್ಷ್ಮಿರಂಗಯ್ಯ , ಎರಡನೇ ಮಹಾಯುದ್ಧಕಾಲದ ಮೈಸೂರು ಆರ್ಥಿಕತೆ.
- ಲಿಂಗಯ್ಯ, ಈಗಿನ ಘೋರ ಯುದ್ಧ ನಮ್ಮ ಕರ್ತವ್ಯ, 1942.
- ಮಹಾಯುದ್ಧದಲ್ಲಿ ಮೈಸೂರಿನ ಪಾತ್ರ 1914–18, ಸರ್ಕಾರಿ ಮುದ್ರಣಾಲಯ, ಮೈಸೂರು ಸರ್ಕಾರ.
- ಮಯಾ ಜಯಪಾಲ್ , ದಿ ಸ್ಟೋರಿ ಅಪ್ ಎ ಸಿಟಿ, ಇಸ್ಟ ವೆಸ್ಟ್ ಬುಕ್ಸ್. ಪ್ರ.ಲಿ. ಚೆನ್ನೈ, 1997.
- ಮೈಸೂರು ದಸರ ವಸ್ತು ಪ್ರದರ್ಶನ ಕೈಪಿಡಿ, 1951, ಮೈಸೂರು ಸರ್ಕಾರದ ಪ್ರಕಟಿತ, 1951.
- ಮೈಸೂರು ದಸರಾ ವಸ್ತು ಪ್ರದರ್ಶನ ಕೈಪಿಡಿ, 1961.
- ಮೈಸೂರು ಎಕಾನಾಮಿಕ್ ಜರ್ನನಲ್, 1914–1918.
- ಮೈಸೂರು ಎಕಾನಾಮಿಕ್ ಜರ್ನನಲ್, 1939–1945.
- ಮೈಸೂರು ಬ್ಲೂ ಬುಕ್ ಜರ್ನನಲ್ 1918–39